**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ. 78/2019**

ಫ್ರಾ.ಸಾ. 12

ಚಾ.ಸಾ. 23

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 23.12.2024**

| | |
|---|---|
| ಸಾಕ್ಷಿದಾರರ ಹೆಸರು | ಡಾ.ಸತೀಶ್.ಎನ್.ವಿ. |
| ತಂದೆಯ ಹೆಸರು | ವೆಂಕಟೇಗೌಡ |
| ವಯಸ್ಸು | 58 ವರ್ಷ |
| ಉದ್ಯೋಗ | ಸೀನಿಯರ್ ಸ್ಪೆಷಾಲಿಸ್ಟ್, ಮಳವಳ್ಳಿ ಸರ್ಕಾರಿ ಆಸ್ಪತ್ರೆ |
| ವಾಸ | ಮೈಸೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

.1. ನಾನು 2010 ರಿಂದ ಇಲ್ಲಿಯವರೆಗೆ ನಾನು ಸೀನಿಯರ್ ಸ್ಪೆಷಾಲಿಸ್ಟ್ ಆಗಿ ಮಳವಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

.

.2. ದಿನಾಂಕ 18.11.2016 ರಂದು ನಾನು ಕರ್ತವ್ಯದಲ್ಲಿದ್ದಾಗ ಮದ್ಯಾಹ್ನ 2.10 ಗಂಟೆ ಸಮಯಕ್ಕೆ ಚಾಸಾ.1 ಅವರಿಗೆ ಅದೇ ದಿವಸ ಮದ್ಯಾಹ್ನ 12.30 ಗಂಟೆ

ಸಮಯದಲ್ಲಿ ನೆಲಮಾಕನಹಳ್ಳಿಯಲ್ಲಿ ತನ್ನ ಗಂಡ ಸಿದ್ದೇಗೌಡ ಮತ್ತು ಅತ್ತೆ ಮಂಜುಳಮ್ಮ ರವರು ಸೀಮೆಎಣ್ಣೆ ಆಕೆಯ ಮೇಲೆ ಸುರಿದು ಹಲ್ಲೆ ಮಾಡಿರುವ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಲಕ್ಷ್ಮಮ್ಮ ಎಂಬುವವರ ಜೊತೆಗೆ ನಮ್ಮ ಆಸ್ಪತ್ರೆಗೆ ಬಂದಿದ್ದು ಸದರಿಯವರನ್ನು ತಪಾಸಣೆ ಮಾಡಿ ನೋಡಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದವು.

.1. ಎಡಮುಂಗೈ ಮೇಲೆ 2 X 2 ಸೆಂ.ಮೀ. ಅಳತೆಯ ತರಚಿದ ಗಾಯ,

.2. ಎಡಮೊಣಕೈ ಮೇಲೆ 1 X 1 ಸೆಂ.ಮೀ. ಅಳತೆಯ ತರಚಿದ ಗಾಯ,

3. ಎಡಮಂಡಿಯ ಮೇಲೆ 1 X 1 ಸೆಂ.ಮೀ. ಅಳತೆಯ ತರಚಿದ ಗಾಯ,

.

.3. ಸದರಿಯವವರು ನನ್ನ ಹತ್ತಿರ ಬಂದಾಗ ಆಕೆಯ ಬಟ್ಟೆ ಮತ್ತು ಮೈಮೇಲೆ ಸೀಮೆಎಣ್ಣೆಯ ವಾಸನೆ ಇತ್ತು. ನನ್ನ ಅಭಿಪ್ರಾಯದಲ್ಲಿ ಈ ಎಲ್ಲಾ ಗಾಯಗಳು ಸಾಮಾನ್ಯ ಸ್ವರೂಪದ್ದು ಆಗಿರುತ್ತದೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರ ನೀಡಿದ್ದು ಅದನ್ನು ನಿಶಾನೆ ಪಿ 8 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ 8 ಎ ಎಂದು ಗುರುತಿಸಲಾಗಿದೆ. ಒಬ್ಬ ವ್ಯಕ್ತಿಗೆ ಕೈಗಳಿಂದ ಹಲ್ಲೆ ಮಾಡಿದ್ದಲ್ಲಿ ಮೇಲೆ ತಿಳಿಸಿದ ಸದರಿ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

.(ಸಾಕ್ಷಿಯು ಮೂಲ ಎಂ ಎಲ್ ಸಿ ರಿಜಿಸ್ಟರ್ ಅನ್ನು ತಂದು ಸಾಕ್ಷ್ಯ ನುಡಿದಿರುತ್ತಾರೆ.)

.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂವಿಆರ್ ವಕೀಲರಿಂದಃ**

1. ಚಾಸಾ.1 ನೇರವಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದು ಇದಕ್ಕಿಂತ ಪೂರ್ವದಲ್ಲಿ ಯಾವುದೇ ಆಸ್ಪತ್ರೆಯಿಂದ ನಮಗೆ ಆಕೆಯನ್ನು ರೆಫರ್ ಮಾಡಿರಲಿಲ್ಲ. ಗಾಯದ ವಯಸ್ಸು ಹಾಗೂ ಬಣ್ಣ ನಮೂದಿಸಿಲ್ಲ ಎಂದರೆ ಸರಿ. ಒಬ್ಬ ವ್ಯಕ್ತಿ ಬಿರುಸಾದ ನೆಲದ ಮೇಲೆ ಬಿದ್ದಲ್ಲಿ ಸದರಿ ಗಾಯಗಳು ಆಗುವ ಸಾಧ್ಯತೆ ಇರುತ್ತದೆಂದರೆ ಸರಿ. ನನ್ನ ಸಮಕ್ಷಮ ಚಾಸಾ.1 ರವರ ಬಟ್ಟೆಯನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡು ಲ್ಯಾಬಿಗೆ ಕಳುಹಿಸಿಕೊಡಲಾಗಿತ್ತು. ಈ ಬಗ್ಗೆ ಪೊಲೀಸರು ಮಹಜರ್ ಬರೆದು ನನ್ನ ಸಹಿ ಪಡೆದುಕೊಂಡಿರಲಿಲ್ಲ.

ಸದರಿಯವರು ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಇರಲಿಲ್ಲ ಎಂದರೆ ಸರಿ. ಚಾಸಾ.1 ನನ್ನ ಹತ್ತಿರ ಹಲ್ಲೆಯ ಹಿನ್ನೆಲೆಯನ್ನು ತಿಳಿಸಿರಲಿಲ್ಲ ಎಂದರೆ ಸರಿಯಲ್ಲ. ಯಾವತ್ತೂ ಚಾಸಾ.1 ರವರಿಗೆ ನಾನು ಚಿಕಿತ್ಸೆ ನೀಡಿಲ್ಲ, ಬಟ್ಟೆಯನ್ನು ನನ್ನ ಮುಂದೆ ಜಪ್ತಿ ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆ ಮೇರೆಗೆ ಪ್ರಮಾಣ ಪತ್ರ ನೀಡಿರುತ್ತೇನೆಂದರೆ ಸರಿಯಲ್ಲ.

(ಮರು ವಿಚಾರಣೆಃ ಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.